# ಶಿಕ್ಷಣ ನೀತಿ ಮತ್ತು ಆಚರಣೆಯಲ್ಲಿ | ಒಂದು ವಿಮರ್ಶಾತ್ಮಕ ದೃಷ್ಟಿಕೋನ

ಡಾ. ಶಾಶ್ವತಿ ಪೈಕ್

ಎಲ್ಲಾ ಮಕ್ಕಳು ಕಲಿಯಬಲ್ಲರೆಂಬುದು ಸತ್ಯ ಸಂಗತಿ. ಕಲಿಕೆಯು ಯಾವುದೇ ಸ್ಥಳದಲ್ಲಿ ಮತ್ತು ಯಾವುದೇ ಸಮಯದಲ್ಲಿ ಆಗಬಹುದು. ಮಕ್ಕಳ ಕಲಿಕೆಯ ಅವಕಾಶಗಳು ಹಲವಾರು ಕಾರಣಗಳಿಂದ ವಿಭಿನ್ನವಾಗಿರುತ್ತವೆ. ಕಲಿಕೆಯನ್ನು ಆಸಕ್ತಿದಾಯಕ ರೀತಿಯಲ್ಲಿ ಸುಗಮಗೊಳಿಸುವ ಶಾಲೆಗಳಿಗೆ ಪ್ರವೇಶವನ್ನು ಪಡೆಯುವ ಹಾಗೂ ಎಲ್ಲಾ ಆಧುನಿಕ ಕಲಿಕಾ ಸಾಧನಗಳನ್ನು ಕೈಗೆಟುಕಿಸಿಕೊಳ್ಳುವ ಮಕ್ಕಳಿದ್ದಾರೆ. ಹಾಗೆಯೇ, ತಮ್ಮ ಪರಿಸ್ಥಿತಿ ಅಥವಾ ಸಂದರ್ಭದ ಕಾರಣಗಳಿಂದಾಗಿ ಇಂತಹ ಅವಕಾಶಗಳು ಸಿಗದಿರುವ, ಸವಲತ್ತು ಹೊಂದಿರದ ಶಾಲೆಗೆ ಹೋಗುತ್ತಿರುವ ಮೊದಲ ಪೀಳಿಗೆಯ ಮಕ್ಕಳೂ ಇದ್ದಾರೆ. ಅವರಿಗೆ ಕಲಿಕೆಯಲ್ಲಿ ಶಾಲೆಯು ಅನೇಕ ವಿಧಗಳಲ್ಲಿ ದೊಡ್ಡ ಪಾತ್ರವನ್ನು ವಹಿಸುತ್ತದೆ. ಅಂಥ ಒಂದು ಸ್ಥಳ ರಾಜಸ್ಥಾನದ ಬಾಡ್‌ಮೇರ್ ಜಿಲ್ಲೆಯ ಶಿವ್ ಬ್ಲಾಕ್. ಈ ಶಾಲೆಯಲ್ಲಿ ಮೂರು ವರ್ಷಗಳ ಒಂದು ಸಂಶೋಧನಾ ಅಧ್ಯಯನವನ್ನು ಕೈಗೊಳ್ಳಲಾಯಿತು. ಈ ಲೇಖನವು ಪ್ರಮುಖವಾಗಿ ಆ ಸಂಶೋಧನೆಯನ್ನು ಆಧರಿಸಿದ್ದು, ಈ ಕೆಳಗಿನ ಮುಖ್ಯಾಂಶಗಳನ್ನು ಸೂಚಿಸುತ್ತದೆ:

- ಎಲ್ಲಿ ಸಾಮಾಜಿಕ ಅಭಿವೃದ್ಧಿಯ ಮಾನದಂಡದ ಸ್ಥಾನಮಾನಗಳು ಮಕ್ಕಳ ಕಲಿಕೆಗೆ ತಡೆಯೊಡ್ಡುತ್ತವೆಯೋ ಅದಕ್ಕೆ ಸಂಬಂಧಿಸಿದ ವಿಚಾರಗಳು – ಅನಕ್ಷರತೆಯನ್ನೂ ಒಳಗೊಂಡಂತೆ– ಬಹಳ ಆತಂಕಕಾರಿಯಾಗಿವೆ.

- ಕಲಿಯಲು ಉತ್ಸುಕರಾಗಿರುವ ಆದರೆ ಸಾಕಷ್ಟು ಅವಕಾಶವಿಲ್ಲದೆ ದಶಕಗಳಷ್ಟು ಹಿಂದಕ್ಕೆ ಉಳಿಯುವ ಮಕ್ಕಳಿಗೆ ವ್ಯವಸ್ಥೆಯ ಸಮಸ್ಯೆಗಳು ಮತ್ತೂ ದೊಡ್ಡ ಅಡಚಣೆಯನ್ನುಂಟುಮಾಡುತ್ತವೆ.

- ಅಂತಹ ಮಕ್ಕಳ ಕಲಿಕೆಯನ್ನು ಹೆಚ್ಚಿಸಲು ಸರ್ಕಾರ ಮತ್ತು ಅಥವಾ ಇತರ ಏಜೆನ್ಸಿಗಳು ಆದ್ಯತೆ ನೀಡಬೇಕಾದ ತಾತ್ಕಾಲಿಕ ವಲಯಗಳು ಅಥವಾ ಕ್ಷೇತ್ರಗಳು.

**ಮಕ್ಕಳ ಕಲಿಕೆಗೆ ಅಡ್ಡಿಯಾಗುವ ಸನ್ನಿವೇಶ**

ನೀವು ಅಲ್ಲಿನ ಒಂದು ಶಾಲೆಗೆ ಭೇಟಿ ನೀಡಿದರೆ, ಪ್ರಾಥಮಿಕ ತರಗತಿಯಲ್ಲಿ (1ನೇ ತರಗತಿಯಿಂದ 7ನೇ ತರಗತಿ) ಕಲಿಯುತ್ತಿರುವ ಮಕ್ಕಳು ಅವರಿಗೆ ಪರಿಚಯವಿಲ್ಲದಿದ್ದರೂ ನಿಮ್ಮನ್ನು ತರಗತಿಯಲ್ಲಿ 'ಏನನ್ನಾದರೂ' ಕಲಿಸಿ ಎಂದು ಕೇಳಬಹುದು. ಇದನ್ನು ನಾನು ರಾಜಸ್ಥಾನದ ಥಾರ್ ಮರುಭೂಮಿ ಅಂಚಿನಲ್ಲಿರುವ ಶಿವ ಬ್ಲಾಕ್‌ನ ಶಾಲೆಗಳಲ್ಲಿ ಪದೇಪದೇ ಅನುಭವಿಸಿದ್ದೇನೆ. ಈ ಶಾಲೆಗಳು ಸಣ್ಣ ಕುಗ್ರಾಮಗಳನ್ನು (ಸ್ಥಳೀಯವಾಗಿ ಧಾನಿ ಎನ್ನುತ್ತಾರೆ) ಒಳಗೊಂಡಿರುವ ದೂರದ ಹಳ್ಳಿಗಳಲ್ಲಿವೆ. ಇಲ್ಲಿ ಸಾರಿಗೆ ಮತ್ತು ಸಂಪರ್ಕದ ವ್ಯವಸ್ಥೆ ಸರಿಯಾಗಿಲ್ಲ, ಆಗಾಗ್ಗೆ ವಿದ್ಯುತ್ ಸಂಪರ್ಕ ಕಡಿತವಿರುತ್ತದೆ ಅಥವಾ ಸಂಪರ್ಕವೇ ಇರುವುದಿಲ್ಲ ಮತ್ತು ಇಂಟರ್ನೆಟ್ ಒಂದು ಕನಸೇ ಸರಿ. ಅನೇಕ ಮಕ್ಕಳ ಹೆತ್ತವರು ಅನಕ್ಷರಸ್ಥರು ಅಥವಾ ಅಲ್ಪಸ್ವಲ್ಪ ಕಲಿತವರಷ್ಟೇ. ಇಲ್ಲಿ ಹೆಣ್ಣು ಭ್ರೂಣಹತ್ಯೆ ಮತ್ತು ಬಾಲ್ಯವಿವಾಹ ತೀರಾ ಸಾಮಾನ್ಯ. ಇಲ್ಲಿನ ಅಂಗನವಾಡಿಗಳು ಕೆಲಸ ಮಾಡುವುದೇ ಅಪರೂಪ ಮತ್ತು ಗ್ರಂಥಾಲಯವಂತೂ ಇಲ್ಲವೇ ಇಲ್ಲ.

ಈ ಮಕ್ಕಳು ಅಪರಿಚಿತರನ್ನು ತಮಗೆ ಏನಾದರೂ ಕಲಿಸಬೇಕೆಂದು ಏಕೆ ಕೋರುತ್ತಾರೆ? ಇದಕ್ಕೆ ಒಂದು ಕಾರಣವೆಂದರೆ ಇಂತಹ ಅನೇಕ ಶಾಲೆಗಳ ತರಗತಿಗಳಲ್ಲಿ ಶಿಕ್ಷಕರು ಇರುವುದಿಲ್ಲ, ಕೆಲವೊಮ್ಮೆ ಇಡೀ ದಿನ ಯಾರೂ ಇರುವುದೇ ಇಲ್ಲ. ಶಾಲಾ ಸಮಯದಲ್ಲಿ ಶಿಕ್ಷಕರು ಬೇರೆ ಯಾವುದಾದರೂ ಕೆಲಸದಲ್ಲಿ 'ಕಾರ್ಯನಿರತರಾಗಿರಬಹುದು', ಅದು ಪಾಠ ಹೇಳಿಕೊಡುವುದೇ ಆಗಿರಬೇಕಿಲ್ಲ. ವರ್ಷದಲ್ಲಿ ಅನೇಕ ಸಲ ಈ ಪರಿಸ್ಥಿತಿಯಿದ್ದರೆ ಮಕ್ಕಳಿಗೆ ಶಾಲೆಯಲ್ಲಿ ಕಲಿಯಲು ಅವಕಾಶ ಸಿಗುವುದಿಲ್ಲ. ಎಲ್ಲಿ ಬೇಕಾದರೂ ಕಲಿಯಬಹುದು ಎಂದು ಯಾರಾದರೂ ವಾದಿಸಿದರೆ ಖಂಡಿತವಾಗಿಯೂ ನಾನು ಅದನ್ನು ಒಪ್ಪುತ್ತೇನೆ. ಆದರೆ ಈ ಸ್ಥಳದಲ್ಲಿ ಕಲಿಕೆಗೆ ನಿರ್ದಿಷ್ಟ ಮಿತಿಗಳಿರುವ ಸನ್ನಿವೇಶವಿರುವುದರಿಂದ ಕಲಿಕೆಯು ಔಪಚಾರಿಕ ಶೈಕ್ಷಣಿಕ ಸ್ಥಳಗಳಲ್ಲಿ ಆಗುತ್ತದೆ ಎಂಬುದು ಪ್ರಶ್ನಾರ್ಹವಾಗುತ್ತದೆ. ಈ ಮಕ್ಕಳಿಗೆ ಅವರ ಮನೆಗಳಲ್ಲಿ ಔಪಚಾರಿಕ ಕಲಿಕೆಗೆ ಪೋಷಕರ ಬೆಂಬಲವಂತೂ ಇಲ್ಲ. ಅವರು ಏನು ಕಲಿಯುತ್ತಾರೆಂದರೆ ತಮ್ಮ ಸಮಾಜದ ಪಿತೃಪ್ರಧಾನ ಸಂಪ್ರದಾಯಗಳಾದ ಲಿಂಗ ತಾರತಮ್ಯ, ಬಾಲ್ಯ-ವಿವಾಹ ಇತ್ಯಾದಿ ಆಚರಣೆಗಳನ್ನು ಪೋಷಿಸುವ ನಂಬಿಕೆ ವ್ಯವಸ್ಥೆಗಳನ್ನು. ಈ ಬ್ಲಾಕ್‌ನ ಬಹುತೇಕ ಹಳ್ಳಿಗಳಿಗೆ ಹತ್ತಿರದ ಸರ್ಕಾರಿ ಪದವಿ ಕಾಲೇಜು 50 ಕಿ.ಮೀ. ದೂರದಲ್ಲಿದೆ. ಆದ್ದರಿಂದ ಇಲ್ಲಿನ ವಿದ್ಯಾರ್ಥಿಗಳಿಗೆ ಹನ್ನೆರಡನೇ ತರಗತಿಯ ನಂತರ ಶಿಕ್ಷಣವು ಕನಸಾಗಿ ಉಳಿದಿದೆ.

ರಾಜಸ್ಥಾನದ ಜಿಲ್ಲೆಗಳ ಮಾನವ ಅಭಿವೃದ್ಧಿ ಸೂಚ್ಯಂಕದ (Human Development Index -HDI) ಪ್ರಕಾರ ಬಾಡ್‌ಮೇರ್ ಅತ್ಯಂತ ಕೆಳಸ್ಥಾನದಲ್ಲಿದೆ. ಅದರ ಎಚ್‌ಡಿಐ ಮೌಲ್ಯ ಕೇವಲ 0.4035, ಅದೇ ಜೈಪುರ ಜಿಲ್ಲೆಯ ಎಚ್‌ಡಿಐ ಮೌಲ್ಯ 0.7308 ಆಗಿದ್ದು ಪ್ರಥಮ ಸ್ಥಾನದಲ್ಲಿದೆ. (ಸಿಂಗ್ ಮತ್ತು ಕೇಸರಿ, 2016). ಸಾಕ್ಷರತೆ ಪ್ರಮಾಣ 2011ರ ಜನಗಣತಿಯಲ್ಲಿ ರಾಜಸ್ಥಾನ ರಾಜ್ಯದ ಒಟ್ಟು ಸರಾಸರಿ 66.1ರಷ್ಟಿದ್ದಾಗ ಬಾಡ್‌ಮೇರ್ ಜಿಲ್ಲೆಯಲ್ಲಿ ಶೇಕಡ 56.5ರಷ್ಟಿತ್ತು. ಸಾಕ್ಷರತೆಯಲ್ಲಿ ಬಾಡ್‌ಮೇರ್‌ನ ಲಿಂಗಾನುಪಾತವು ಶೇಕಡಾ 30.3ರಷ್ಟಿತ್ತು. ಈ ಕೆಳಗಿನ ಕೋಷ್ಟಕದಲ್ಲಿ 2011ರ ಜನಗಣತಿ ಪ್ರಕಾರ ಬಾರ್ಮರ್‌ನ ಶೇಕಡಾವಾರು ಅನಕ್ಷರಸ್ಥ ವಯಸ್ಕರ ಸಂಖ್ಯೆ ಬಹಳ ಹೆಚ್ಚು ಎಂದು ಸೂಚಿಸುತ್ತದೆ ಮತ್ತು ಆ ಕುಟುಂಬಗಳಲ್ಲಿ ಮಕ್ಕಳ ಕಲಿಕೆಗೆ ಅವಕಾಶ ಕಡಿಮೆ ಎಂಬುದನ್ನು ಈ ಆತಂಕಕಾರಿ ವಿಷಯವು ತೋರಿಸುತ್ತದೆ.

ಕೋಷ್ಟಕ 1: 2011ರ ಜನಗಣತಿಯ ಪ್ರಕಾರ ವಯಸ್ಕರ ಅನಕ್ಷರತೆ

| ಪ್ರದೇಶಗಳು | ವಯೋಗುಂಪು | ಒಟ್ಟು | ಗಂಡು | ಹೆಣ್ಣು |
|---|---|---|---|---|
| ಎಲ್ಲಾ ಪ್ರದೇಶಗಳು | 15-34 | 35.89 | 18.93 | 55.83 |
| | 35+ | 70.99 | 53.91 | 88.67 |
| ಗ್ರಾಮಾಂತರ | 15-34 | 37.68 | 19.88 | 58.69 |
| | 35+ | 74.23 | 57.34 | 91.63 |
| ನಗರ | 15-34 | 15.27 | 7.71 | 23.73 |
| | 35+ | 34.24 | 15.98 | 54.10 |

**ನೀತಿನಿಯಮಗಳಲ್ಲಿ ಕಂಡುಬರುವಂತೆ ವ್ಯವಸ್ಥೆಯ ಸಮಸ್ಯೆಗಳು**

ಶೈಕ್ಷಣಿಕ ಆಡಳಿತವು ಮೂರು ಪ್ರಮುಖ ಸ್ತಂಭಗಳನ್ನು ಹೊಂದಿದೆ: ನಿಬಂಧನೆಗಳು, ನಿಯಮಗಳು ಮತ್ತು ಧನಸಹಾಯ. ಭಾರತದಲ್ಲಿ ಶಿಕ್ಷಣವು ಸಹವರ್ತಿ ಪಟ್ಟಿಯ ಒಂದು ವಿಷಯವಾಗಿದೆ. ಆದ್ದರಿಂದ, ಈ ಸ್ತಂಭಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ನಿರ್ವಹಿಸಬೇಕು. ವಿಶೇಷ ಪ್ರಕರಣವೇನೂ ಅಲ್ಲದ ಬಾರ್ಮರ್–ನಂತಹ ದೂರ ಸ್ಥಳಗಳಲ್ಲಿ ಕಲಿಯುವ ಮಕ್ಕಳು ಮತ್ತು ಅವರ ಕಲಿಕೆಗಾಗಿ ಗಮನಹರಿಸುವ ಮುಖ್ಯ ಅಗತ್ಯಗಳನ್ನು ಸೂಚಿಸುವ ಕೆಲವು ಅತ್ಯಂತ ಪ್ರಮುಖ ಮಾನದಂಡಗಳನ್ನು ನೋಡೋಣ. ಆಡಳಿತದಿಂದ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಮಕ್ಕಳಿರುವ ಹಲವಾರು ರಾಜ್ಯಗಳಿರುವುದು ವಾಸ್ತವ ಪರಿಸ್ಥಿತಿ.

2009ರ ಶಿಕ್ಷಣ ಹಕ್ಕು (Right to Education Act 2009-RTE) ಕಾಯ್ದೆಯು ವಿದ್ಯಾರ್ಥಿ ಹಾಗೂ ಶಿಕ್ಷಕರ ನಡುವಿನ ಅನುಪಾತ 1:30 ಎಂದು ನಿಗದಿಪಡಿಸಿದೆ. ರಾಜಸ್ಥಾನವನ್ನೂ ಸೇರಿದಂತೆ ಅನೇಕ ರಾಜ್ಯಗಳ ಶಿಕ್ಷಣ ಇಲಾಖೆಗಳು ಸರ್ಕಾರಿ ಶಾಲೆಗಳ ಬೆಂಬಲ ಸಿಬ್ಬಂದಿಗಳನ್ನು ತೆಗೆದು ಹಾಕಿವೆ. ಅಂತಹ ನಿರ್ಧಾರಗಳು ಶಿಕ್ಷಣದ ಮೇಲೆ ಭಾರೀ ಪರಿಣಾಮ ಬೀರಿವೆ. ಒಂದು ಶಾಲೆಯಲ್ಲಿ 30 ವಿದ್ಯಾರ್ಥಿಗಳಿದ್ದರೆ ಆ ಶಾಲೆಗೆ ಒಬ್ಬ ಶಿಕ್ಷಕ ಮಾತ್ರ ಇರುತ್ತಾರೆ. ಆದರೆ ದಾಖಲಾತಿ ಹೆಚ್ಚಿದರೆ ಉನ್ನತ ಅಧಿಕಾರಿಗಳ ಮಂಜೂರಾತಿಯ ಮೇಲೆ ಶಿಕ್ಷಕರ ಸಂಖ್ಯೆ ಹೆಚ್ಚಬಹುದು. ಶಿವ್ ಬ್ಲಾಕ್‌ನ ಅನೇಕ ಪ್ರಾಥಮಿಕ ಶಾಲೆಗಳಲ್ಲಿ ಕೇವಲ ಒಬ್ಬರು ಅಥವಾ ಇಬ್ಬರು ಶಿಕ್ಷಕರು ಇದ್ದಾರೆ. ಮಾಧ್ಯಮಿಕ ಶಾಲೆಯಲ್ಲಿ ಬಹುತೇಕ ಸಂದರ್ಭದಲ್ಲಿ ನಿರ್ದಿಷ್ಟ ವಿಷಯ ಸಂಬಂಧಿತ ಶಿಕ್ಷಕರು ಇಲ್ಲ. ಆದರೆ ಅಂತಹ ಶಾಲೆಗಳ ಮಕ್ಕಳು ಕಲಿಯಲು ಉತ್ಸುಕರಾಗಿದ್ದಾರೆ. ಆದ್ದರಿಂದ, ಅವರು ಶಿಕ್ಷಿತರೆಂದು ತೋರುವ ಯಾವುದೇ ಅಪರಿಚಿತರನ್ನು ತಮ್ಮ ತರಗತಿಯಲ್ಲಿ ಕಲಿಸಿ ಎಂದು ಕೇಳಿಕೊಳ್ಳುತ್ತಾರೆ.

ಸರ್ಕಾರದ ಎರಡು ಕಲ್ಪಿತ ವಿಷಯಗಳನ್ನು ನೋಡೋಣ ಮೊದಲಿಗೆ, ಒಬ್ಬ ಶಿಕ್ಷಕ 30 ವಿದ್ಯಾರ್ಥಿಗಳನ್ನು, ಅದರೊಂದಿಗೆ ಶಾಲೆಗೆ ಸಂಬಂಧಿಸಿದ ಚಟುವಟಿಕೆಗಳು ಮತ್ತು ಶಾಲಾಭಿವೃದ್ಧಿಯತ್ತ ಗಮನ ಹರಿಸಬೇಕು. ಎರಡನೆಯದಾಗಿ, ಪ್ರಾಥಮಿಕ ಶಾಲೆಗಳಲ್ಲಿ ಯಾವುದೇ ಬೆಂಬಲ ಸಿಬ್ಬಂದಿ ಇಲ್ಲದ ಕಾರಣ, ಬಹುಶಃ ವ್ಯವಸ್ಥೆಯು ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಶಾಲೆಯ ನಿರ್ವಹಣೆಯ ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕೆಂದು ಬಯಸುತ್ತದೆನಿಸುತ್ತದೆ. ಈ ಕಲ್ಪನೆಗಳನ್ನು ವಿಶ್ಲೇಷಿಸಿದರೆ ಅವು ಬಹಳ ಅಸಮಂಜಸವಾಗಿ ಕಾಣುತ್ತವೆ.

ನಿಮ್ಮನ್ನೇ ನೀವು ಬೇರೆಬೇರೆ ತರಗತಿಗಳಲ್ಲಿರುವ ಮತ್ತು ಬೇರೆಬೇರೆ ರೀತಿಯ ಗಮನಹರಿಸ–ಬೇಕಾದ ಅಗತ್ಯವಿರುವ 30–40 ಮಕ್ಕಳ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿದ್ದಿರೆಂದು ಕಲ್ಪಿಸಿಕೊಳ್ಳಿ. ಶಿಕ್ಷಕರಾಗಿ ನೀವು ಸುಗಮಗೊಳಿಸಿದರೆ ಮಾತ್ರ ಮಕ್ಕಳು ಕಲಿಯಲು ಸಾಧ್ಯ. ನೀವು ಒಬ್ಬಂಟಿಯಾಗಿ ಏನು ಮಾಡುತ್ತೀರಾ? ಎಲ್ಲವನ್ನೂ ನೀವೇ ನಿರ್ವಹಿಸಬೇಕು. ಶಾಲೆಯ ದಾಖಲೆಗಳನ್ನು ತುಂಬಬೇಕು, ಮಧ್ಯಾಹ್ನದ ಊಟವನ್ನು ನೋಡಿಕೊಳ್ಳಬೇಕು. ಅಡುಗೆಯವ–ರೊಂದಿಗೆ ಸಹಕರಿಸಬೇಕು. ಜೊತೆಗೆ ಅದೇ ಸಮಯದಲ್ಲಿ, ನೀವು ಬೇರೆಬೇರೆ ತರಗತಿಯ ಮಕ್ಕಳಿಗೆ ಪಾಠ ಕಲಿಸಬೇಕು. ಈ ಎಲ್ಲವನ್ನೂ ಸಮನ್ವಯಗೊಳಿಸಬೇಕಾಗುತ್ತದೆ. ಈ ಎಲ್ಲಾ ಜವಾಬ್ದಾರಿಗಳನ್ನು ಹೊಂದಿರುವ ನೀವು ಶೈಕ್ಷಣಿಕ ವರ್ಷದಲ್ಲಿ ಎಷ್ಟರಮಟ್ಟಿಗೆ ಉತ್ತಮವಾಗಿ ಕೆಲಸವನ್ನು ಮಾಡಬಲ್ಲಿರಿ?

- ಏಕಕಾಲದಲ್ಲಿ ಹಲವು ತರಗತಿಗಳಲ್ಲಿ ಪಾಠ ಮಾಡಲು ಈ ಶಿಕ್ಷಕರು ಅರ್ಹರು ಎಂದು ನಾವು ಭಾವಿಸಿದರೂ ಅವರ ಶೈಕ್ಷಣಿಕ ಅರ್ಹತೆ ಮತ್ತು ಕೆಲಸದ ಅನುಭವವನ್ನು ಅರ್ಥಮಾಡಿಕೊಳ್ಳುವ ಅಗತ್ಯವಿದೆ. ಸರ್ಕಾರದ ಅವಶ್ಯಕತೆಗಳ ನಿಯಮದ ಪ್ರಕಾರ ಪ್ರಾಥಮಿಕ ಶಾಲಾ ಶಿಕ್ಷಕರು (4ನೇ ತರಗತಿಯವರೆಗೆ ಕಲಿಸುವವರು) ಪದವೀಧರರು (ಯಾವುದೇ ಶಾಲಾ ವಿಷಯವನ್ನು ವಿಶೇಷ ಕಲಿತಿರಬೇಕೆಂಬುದೇನೂ ಇಲ್ಲ) ಅಥವಾ ಹನ್ನೆರಡನೇ ತರಗತಿ ಪಾಸಾಗಿದ್ದು ಶಿಕ್ಷಕ ತರಬೇತಿಯ ಡಿಪ್ಲೊಮಾ ಹೊಂದಿರಬೇಕು. ಇತರ ಆಡಳಿತ ಕಾರ್ಯಗಳನ್ನು ನಡೆಸುತ್ತಾ ಏಕಕಾಲಕ್ಕೆ ಹಲವು ತರಗತಿಗಳನ್ನು ನಿರ್ವಹಿಸಲು ಅವರು ಸಾಕಷ್ಟು ಪ್ರಬುದ್ಧರಾಗಿದ್ದಾರೆಯೇ?
- ಯಾವುದೇ ಬೆಂಬಲ ಸಿಬ್ಬಂದಿಯಿಲ್ಲದಿದ್ದರೆ ಶಾಲೆಯ ಆವರಣವನ್ನು ಯಾರು ನೋಡಿಕೊಳ್ಳುತ್ತಾರೆ? ಸಹಜವಾಗಿ ನಿರ್ವಹಣೆಯ ಜವಾಬ್ದಾರಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳದ್ದು ಎಂದರ್ಥವಾಗುತ್ತದೆ. ಅಂದರೆ ಶೌಚಾಲಯಗಳು, ಮಧ್ಯಾಹ್ನದ ಬಿಸಿಯೂಟ ಮಾಡುವ ಸ್ಥಳ, ತರಗತಿ ಕೊಠಡಿಗಳು, ಆಟದ ಮೈದಾನ, ಶಿಕ್ಷಕರ ಕೊಠಡಿಯ (ಇದ್ದರೆ?) ನಿರ್ವಹಣೆ ಯಾರದ್ದು? ಇಂತಹ ಸಂದರ್ಭದಲ್ಲಿ ಬಹುತೇಕ ಕೆಳಜಾತಿಯ ಮಕ್ಕಳು ಶುಚಿಮಾಡುವ ಕೆಲಸದ ಉಸ್ತುವಾರಿ ವಹಿಸಿಕೊಳ್ಳಬೇಕಾಗುತ್ತದೆ. ಇದು ಕಾನೂನುಬದ್ಧವೇ?

ಮಾಧ್ಯಮಿಕ ಶಾಲೆಗಳಲ್ಲಿ ಈ ಎಲ್ಲಾ ಸಮಸ್ಯೆಗಳ ಜೊತೆಗೆ ಪ್ರತಿಯೊಂದು ಪಠ್ಯವಿಷಯದಲ್ಲಿ ನಿರ್ದಿಷ್ಟ ಶಿಕ್ಷಕರ ಕೊರತೆಯೂ ಸೇರಿದೆ.

ಈ ಎಲ್ಲಾ ಕಲ್ಪಿತ ಭಾವನೆಗಳು ಅನೇಕರು ಭಾವಿಸುವಂತೆ ಕೇವಲ ಸವಲತ್ತಿಲ್ಲದ ಬಡ ಮಕ್ಕಳು ಮಾತ್ರ ಸರ್ಕಾರಿ ಶಾಲೆಗಳಿಗೆ ಹೋಗುತ್ತಾರೆ ಮತ್ತು ಈ ಶಾಲೆಗಳನ್ನು ಸುಧಾರಿಸುವ ಯಾವುದೇ ಪ್ರಯತ್ನ ಅನಗತ್ಯ ಎಂಬ ಸರ್ಕಾರಿ ಶಾಲೆಗಳ ಬಗೆಗಿನ ಧೋರಣೆಯನ್ನು ತೋರಿಸುತ್ತದೆ. ಕೆಲವು ದಿನಗಳ ಹಿಂದೆ, ಬಹಳ ಸಂಕಷ್ಟದ ಸನ್ನಿವೇಶಗಳಿಂದ ಬರುವ ಮಕ್ಕಳು ಇರುವ ಅಂತಹ ಒಂದು ಶಾಲೆಯಲ್ಲಿ ಕೆಲಸ ಮಾಡುವ ಒಬ್ಬ ವ್ಯಕ್ತಿ ನನಗೆ ಹೀಗೆ ಹೇಳಿದರು, 'ಮೇಡಂ, ಇವರು ಶಾಲೆಗೆ ಬರಲು ಅವಕಾಶವನ್ನು ಪಡೆಯುತ್ತಾರೆ. ಇಲ್ಲಿ ಅವರಿಗೆ ಊಟ ಸಿಗುತ್ತದೆ. ಇಷ್ಟು ಸಾಕಲ್ಲವೇ ಅವರಿಗೆ? ಇದಕ್ಕೆ ಬದಲಿಗೆ ಅವರು ಶಾಲೆಯ ಆವರಣವನ್ನು ಮತ್ತು ಶೌಚಾಲಯಗಳನ್ನು ಏಕೆ ಶುಚಿಗೊಳಿಸಬಾರದು?'

ನನಗೆ ಈ ವಾದವನ್ನು ಜೀರ್ಣಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಶಿಕ್ಷಣದ ಹಕ್ಕಿನ ಹೆಸರಿನಲ್ಲಿ ಈ ರೀತಿಯಾಗಿ ಮಕ್ಕಳ ಜೊತೆಗೆ ವರ್ತಿಸುವುದು ಸರಿಯಾದ ಕಾರಣವೇ? ನೀತಿನಿರೂಪಕರು ಮತ್ತು ಅದರ ಅನುಷ್ಠಾನಕಾರರು ತಮ್ಮ ಮಕ್ಕಳನ್ನು ಸರಿಯಾಗಿ ಶಿಕ್ಷಕರಿಲ್ಲದ, ಬೆಂಬಲ ಸಿಬ್ಬಂದಿಗಳಿಲ್ಲದ, ನಿಯತವಾಗಿ ಮಕ್ಕಳ ಶೌಚಾಲಯಗಳು, ಶಿಕ್ಷಕರ ಶೌಚಾಲಯಗಳು, ತರಗತಿ ಕೊಠಡಿಗಳು, ಶಾಲಾ ಆವರಣಗಳು ಹಾಗೂ ಬಿಸಿ ಊಟದ ಪಾತ್ರೆಗಳನ್ನೂ ತೊಳೆದು ಶುಚಿಮಾಡಬೇಕಾದ ಶಾಲೆಗೆ ಕಳುಹಿಸುತ್ತಾರೆಯೇ?

**ವಾಸ್ತವ ಆಚರಣೆಯಲ್ಲಿ ಕಂಡುಬರುವಂತೆ ವ್ಯವಸ್ಥೆಯ ಸಮಸ್ಯೆಗಳು**

ತೀರಾ ಇತ್ತೀಚಿನ ಬೆಳವಣಿಗೆಯಾಗಿ ಕೇಂದ್ರದಿಂದ ಪ್ರಾಯೋಜಿತವಾದ ಸಮಗ್ರ ಶಿಕ್ಷಣ ಯೋಜನೆಯ ಅಡಿಯಲ್ಲಿ ಸಮಗ್ರ ಶಿಕ್ಷಾ ತರಬೇತಿ ಕಾರ್ಯಕ್ರಮವಾದ (Integrated Teacher Training Programme) 'ನಿಷ್ಠಾ' ಪ್ರಾರಂಭವಾಗಿದೆ. (2019–2020). ಇದು ಪ್ರಾಥಮಿಕ ಹಂತದಲ್ಲಿ ಕಲಿಕೆಯ ಫಲಿತಾಂಶಗಳನ್ನು ಸುಧಾರಿಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯು ಪ್ರಾರಂಭಿಸಿದ ರಾಷ್ಟ್ರೀಯ ಯೋಜನೆಯಾಗಿದೆ. ಸರ್ಕಾರಿ ಜಾಲತಾಣವು ಇದು 'ಸಮಗ್ರ ಶಿಕ್ಷಕರ ತರಬೇತಿ ಕಾರ್ಯಕ್ರಮದ ಮೂಲಕ ಶಾಲಾ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಸಾಮರ್ಥ್ಯ ವೃದ್ಧಿಸುವ ಕಾರ್ಯಕ್ರಮ' ಎಂದು ಹೇಳುತ್ತದೆ. 'ನಿಷ್ಠಾ' (NISHTHA) ಎಂಬುದು ವಿಶ್ವದ ಅತಿದೊಡ್ಡ ಶಿಕ್ಷಕ ತರಬೇತಿ ಕಾರ್ಯಕ್ರಮವಾಗಿದ್ದು ಪ್ರಾಥಮಿಕ ಹಂತದಲ್ಲಿ ಎಲ್ಲಾ ಶಿಕ್ಷಕರು ಮತ್ತು ಶಾಲೆಯಲ್ಲಿ ಪ್ರಾಂಶುಪಾಲರ ಸಾಮರ್ಥ್ಯಗಳನ್ನು ರೂಪಿಸುವ ಗುರಿಯನ್ನು ಹೊಂದಿದೆ. ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಚಿಂತನೆಯನ್ನು ರೂಪಿಸಲು ಪ್ರೋತ್ಸಾಹಿಸುವಂತೆ ಶಿಕ್ಷಕರನ್ನು ಸಜ್ಜುಗೊಳಿಸುವುದು ಈ ಬೃಹತ್ ತರಬೇತಿ ಕಾರ್ಯಕ್ರಮದ ಉದ್ದೇಶವಾಗಿದೆ. ಇದು ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೂ ಸೇರಿದಂತೆ ಇಡೀ ರಾಷ್ಟ್ರ ಮಟ್ಟದಲ್ಲಿ (www.india.gov.in) ಒಂದು ಪ್ರಮಾಣೀಕೃತ ತರಬೇತಿ ಕಾರ್ಯವಿಧಾನ (ಮಾಡ್ಯೂಲ್)ಗಳನ್ನು ಅಭಿವೃದ್ಧಿಗೊಳಿಸಲಾಗಿರುವ ಮೊಟ್ಟ ಮೊದಲ ಉಪಕ್ರಮವಾಗಿದೆ.

ಶಿಕ್ಷಕರು ಪರಸ್ಪರ ಬೆರೆತು ವಿಚಾರ ವಿನಿಮಯ ಮಾಡಿಕೊಳ್ಳಲು ಈ ಕಾರ್ಯಕ್ರಮವು ಒಂದು ಉತ್ತಮವಾದ ವೇದಿಕೆಯನ್ನು ಒದಗಿಸುತ್ತದೆ. ಈ ತರಬೇತಿ ಘಟಕಗಳು (Training Modules) ಉತ್ತಮವಾಗಿ ವಿನ್ಯಾಸಗೊಳಿಸಲ್ಪಟ್ಟಿದ್ದು ಇದನ್ನು ರೂಪಿಸಲು ನಡೆದ ಪ್ರಯತ್ನಗಳು ಬಹಳ ಸ್ಪಷ್ಟವಾಗಿ ಗೋಚರಿಸುತ್ತವೆ. ಈ ಕಾರ್ಯಕ್ರಮವು ನಿರ್ದಿಷ್ಟ ಅಗತ್ಯದ ಪ್ರಕಾರ ವಿವಿಧ ಹಂತಗಳ ಕ್ರಮವಿಧಾನದಲ್ಲಿ ನಡೆಸುವಂತಹದ್ದು, ಅಂದರೆ ಇಲ್ಲಿ ರಾಷ್ಟ್ರ ಮಟ್ಟದ ಸಂಪನ್ಮೂಲ ತಜ್ಞರ ತಂಡವು (National Resource Group of Experts) ಪ್ರಮುಖ ಸಂಪನ್ಮೂಲ ವ್ಯಕ್ತಿಗಳಿಗೆ (Key Resource Persons -KRP) (ತದನಂತರದ ತರಬೇತಿಗಾಗಿ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶಗಳಲ್ಲಿ ಗುರುತಿಸಲ್ಪಟ್ಟವರು) ಮತ್ತು ರಾಜ್ಯ ಸಂಪನ್ಮೂಲ ವ್ಯಕ್ತಿಗಳಿಗೆ (State Resource Persons -SRP) (ರಾಜ್ಯ ಅಥವಾ ಕೇಂದ್ರ ಪ್ರದೇಶಗಳ ಶಾಲಾ ಪ್ರಾಂಶುಪಾಲರು ಮತ್ತು ಇತರ ಸಿಬ್ಬಂದಿಗಳಿಗೆ ಮತ್ತಷ್ಟು ಹೆಚ್ಚಿನ ತರಬೇತಿಗಾಗಿ ಗುರುತಿಸಲ್ಪಟ್ಟವರು) ತರಬೇತಿ ನೀಡುತ್ತಾರೆ. ಈ ಕೆಆರ್‌ಪಿ ಮತ್ತು ಎಸ್‌ಆರ್‌ಪಿಗಳು ನೇರವಾಗಿ ಶಿಕ್ಷಕರು ಮತ್ತು ಶಾಲಾ ಪ್ರಾಂಶುಪಾಲರಿಗೆ ತರಬೇತಿ ನೀಡುತ್ತಾರೆ ಎಂದು ಹೇಳಲಾಗಿದೆ (itpd.ncert.gov.in). ಈ ಹಿಂದೆ ಹಲವಾರು ಹಂತಗಳಿದ್ದ ಕಾರಣ ಸಂವಹನ ಅಥವಾ ಸಂಪರ್ಕ ಕೊರತೆಯಿಂದಾಗುವ ನಷ್ಟವನ್ನು ಕಡಿಮೆ ಮಾಡಲು ಈ ತರಬೇತಿ ನೆರವು ನೀಡುತ್ತದೆ ಎಂದು ಹೇಳಲಾಗಿದೆ. ಈ ಎಲ್ಲಾ ಭರವಸೆಗಳ ಹೊರತಾಗಿಯೂ ಇನ್ನೂ ಕೆಲವು ಸಮಸ್ಯೆಗಳನ್ನು ಗುರುತಿಸ–ಬೇಕಾಗಿದೆ ಮತ್ತು ಸೂಕ್ತವಾಗಿ ಪರಿಹರಿಸಬೇಕಾಗಿದೆ. ಅವುಗಳನ್ನು ಈ ಕೆಳಗೆ ಚರ್ಚಿಸಲಾಗಿದೆ.

**ದೊಡ್ಡ ಸಂಖ್ಯೆಯನ್ನು ಒಳಗೊಂಡ ದೊಡ್ಡ ಪ್ರಮಾಣದ ಗುರಿ**

ಸರ್ಕಾರದ ಜಾಲತಾಣ/ವೆಬ್‌ಸೈಟ್ 'ಪ್ರಾಥಮಿಕ ಹಂತದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಶಿಕ್ಷಕರು, ಪ್ರಾಂಶುಪಾಲರು, ಬ್ಲಾಕ್ ಸಂಪನ್ಮೂಲ ಸಂಯೋಜಕರು, ಕ್ಲಸ್ಟರ್ ಸಂಪನ್ಮೂಲ ಸಂಯೋಜಕರಿಗೆ ಕಲಿಕೆಯ ಕೇಂದ್ರಿತವಾದ ಕಲಿಕಾ ಕಲೆ, ಕಲಿಕೆಯ ಫಲಿತಾಂಶಗಳು, ಮಕ್ಕಳ ಸಾಮಾಜಿಕ ವೈಯಕ್ತಿಕ ವ್ಯಕ್ತಿಗತ ಗುಣಮಟ್ಟ ಸುಧಾರಣೆ, ಶಾಲಾಧಾರಿತ ಮೌಲ್ಯಮಾಪನ, ಹೊಸ ಉಪಕ್ರಮಗಳು, ಶಾಲಾ ಸುರಕ್ಷತೆ ಮತ್ತು ಭದ್ರತೆ, ಕಲಿಕಾ ಕಲೆಯ ಅಥವಾ ಜ್ಞಾನದ ಬೇರೆಬೇರೆ ವಿಷಯಗಳ ಬಗ್ಗೆ ತರಬೇತಿ ಸಮಯಯಲ್ಲಿ ಅರಿವು ಮೂಡಿಸಲಾಗುತ್ತದೆ' ಎಂದು ಘೋಷಿಸಿದೆ.

ಇಲ್ಲಿಯವರೆಗೆ ನೀಡಿದ ಭರವಸೆಯ ಪ್ರಕಾರ 42 ಲಕ್ಷ ಶಿಕ್ಷಕರ ಸಾಮರ್ಥ್ಯ ವೃದ್ಧಿಗಾಗಿ ಹಲವಾರು ಕ್ಷೇತ್ರಗಳನ್ನು ಒಳಗೊಳ್ಳುವ ತರಬೇತಿ ನಡೆಸುವುದು ನಿಜಕ್ಕೂ ಕಠಿಣ ಕೆಲಸ. ಹೀಗಾಗಿ ಹೊಣೆಗಾರಿಕೆಯಲ್ಲಿ ದೊಡ್ಡ ತೊಡಕುಗಳಿರುವುದರಿಂದ ಮತ್ತು ಹಲವಾರು ಪಾಲುದಾರರನ್ನು ಭಾಗಿಯಾಗಿಸುವುದರಿಂದ ಗುರಿಯು ದೊಡ್ಡ ಪ್ರಮಾಣದಲ್ಲಿದ್ದಾಗ ಸಾಧನೆಯು ಪ್ರಶ್ನಾರ್ಹವಾಗಿ ಉಳಿಯುತ್ತದೆ. ಇಷ್ಟೇ ಅಲ್ಲದೆ, 'ಒಂದೇ ಅಂಗಿ ಎಲ್ಲರಿಗೂ ಹೊಂದುತ್ತದೆ' ಎಂಬ ಧೋರಣೆಯು ಸಮಸ್ಯೆಯೇ ಆಗಿದೆ. ದೊಡ್ಡ ಸಂಖ್ಯೆಯ ಮಟ್ಟದ ಗುರಿಯಿಟ್ಟುಕೊಳ್ಳುವ ಬದಲು ಹಂತಹಂತವಾಗಿ ಮುನ್ನಡೆಯುವುದು ಉತ್ತಮ. ಇದು ಯಶಸ್ವಿಯಾಗಲು ಬಹಳ ಎಚ್ಚರಿಕೆಯಿಂದ ಆದ್ಯತೆಗಳನ್ನು ನಿರ್ಧರಿಸಬೇಕು. ಅಪರೂಪಕ್ಕೆ ಎನ್‌ಜಿಒ ಅಥವಾ ಸಿಎಸ್‌ಆರ್ ಬೆಂಬಲ ಹೊಂದುವ ಅದೃಷ್ಟವಿರುವ ಕುಗ್ರಾಮಗಳ ಶಾಲೆಗಳು ಇಂತಹ ಯೋಜನೆಯಲ್ಲಿ ಆದ್ಯತೆ ಪಡೆಯಬೇಕು ಮತ್ತು ಇಂತಹ ಶಾಲೆಗಳ ಶಿಕ್ಷಕರಿಗೆ ಭಿನ್ನವಾಗಿ ಯೋಜನೆಯನ್ನು ರೂಪಿಸಬೇಕು.

**ಸುತ್ತಮುತ್ತಲಿನ ಸನ್ನಿವೇಶವನ್ನು ಗಮನದಲ್ಲಿರಿಸಿಕೊಳ್ಳದ ದೃಷ್ಟಿಕೋನದ ಪರಿಕಲ್ಪನೆಗಳು**

ಬಹುಬಾರಿ ಇಂತಹ ತರಬೇತಿಗಳು ಎನ್‌ಜಿಒ ಸಿಬ್ಬಂದಿಗಳ ಮತ್ತು ಶಿಕ್ಷಣ ಕಾರ್ಯಕರ್ತರ ಅನುಕೂಲಕ್ಕೆ ಅನುಗುಣವಾಗಿ ಒಂದು ಸಾಮಾನ್ಯ ಸ್ಥಳದಲ್ಲಿ ನಡೆಯುತ್ತವೆ. ದೈನಂದಿನ ಶಾಲಾ ಜೀವನದ ಏಕತಾನತೆಯಿಂದ ಮುಕ್ತರಾಗಿ ಇಂತಹ ಆರಾಮದಾಯಕ ಹಾಗೂ

ಉಪಶಮನ ಸ್ಥಿತಿಯನ್ನು ಕೆಲವು ಶಿಕ್ಷಕರು ಸ್ವಾಗತಿಸಬಹುದು. ಆದರೆ ವಿಶೇಷವಾಗಿ ಸ್ವಯಂಪ್ರೇರಿತರಾದ ಮತ್ತು ಪ್ರಾಮಾಣಿಕ ಬದ್ಧತೆಯುಳ್ಳ ಅನೇಕರಿಗೆ ಇದು ಅನನುಕೂಲವೆನಿಸುತ್ತದೆ. ಇಂತಹ ತರಬೇತಿಗಳಿಂದಾಗಿ ಶಿಕ್ಷಕರು ಒಂದು ವರ್ಷದಲ್ಲಿ ಹಲವು ವಾರಗಳ ಕಾಲ ತಮ್ಮ ಬೋಧನಾ ಸಮಯವನ್ನು ಕಳೆದುಕೊಳ್ಳುತ್ತಾರೆ. ಅಷ್ಟೇ ಅಲ್ಲದೆ ಇದರ ಜೊತೆಗೆ ಕಲಿಯಲು ಉತ್ಸುಕರಾಗಿರುವ ಮಕ್ಕಳು ತಮ್ಮ ಪಾಠವನ್ನು ಕಳೆದುಕೊಳ್ಳುತ್ತಾರೆ. ತರಬೇತಿಯ ಸಂಘಟಕರು ಈ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

'ನಿಷ್ಠಾ' ತರಬೇತಿಯ ಒಂದು ಮಾಡ್ಯೂಲ್‌ನಲ್ಲಿ ಮಹಾತ್ಮ ಗಾಂಧಿಯವರ ನುಡಿಯ ಉಲ್ಲೇಖವಿದೆ. 'ಒಂದು ನೈಜ ಶಿಕ್ಷಣವು ಸುತ್ತಮುತ್ತಲಿನ ಸನ್ನಿವೇಶಗಳಿಗೆ ಹೊಂದಿಕೊಂಡಿರಬೇಕು..' ಆ ಆಲೋಚನೆಯಂತೆ ಇಂತಹ ತರಬೇತಿ ಕಾರ್ಯಕ್ರಮಗಳನ್ನು ಶಾಲೆಗಳಲ್ಲಿಯೇ ಏರ್ಪಡಿಸಬೇಕು. ಅಲ್ಲಿ ವಿದ್ಯಾರ್ಥಿಗಳೊಂದಿಗೆ ಶಿಕ್ಷಕರಿಗೆ ಪ್ರಾತ್ಯಕ್ಷಿಕೆ ತರಗತಿಗಳನ್ನು (Demo classes) ತರಬೇತಿಯಲ್ಲಿ ತೊಡಗಿರುವ ತಜ್ಞರು ತೆಗೆದುಕೊಳ್ಳಬೇಕು. ಉತ್ತಮ ಕಾರ್ಯ ವ್ಯವಸ್ಥೆಗಾಗಿ ನಾಲ್ಕು ಅಥವಾ ಐದು ಶಾಲೆಗಳನ್ನು ಗುರುತಿಸಬೇಕು. ಒಂದು ವಾರಕ್ಕೆ ಮೀರದಂತೆ ಯಾವುದಾದರೂ ಒಂದು ಕ್ಲಸ್ಟರ್ ಶಾಲೆಯಲ್ಲಿ ಶಿಕ್ಷಕರನ್ನು ಒಟ್ಟಿಗೆ ಸೇರಿಸಬೇಕು ಮತ್ತು ತರಬೇತಿಯ ಸ್ಥಳವನ್ನು ಸರದಿಯ ಪ್ರಕಾರ ಬದಲಾಯಿಸಬೇಕು. ಪ್ರತಿಯೊಬ್ಬ ಶಿಕ್ಷಕರು ಸಮರ್ಪಕವಾದ ರೀತಿಯಲ್ಲಿ ಪ್ರಾತ್ಯಕ್ಷಿಕೆ ತರಬೇತಿ ತರಗತಿಯನ್ನು ತಮ್ಮ ಶಾಲೆಯಲ್ಲಿಯೇ ಕನಿಷ್ಠ ಒಂದು ದಿನವಾದರೂ ತರಬೇತಿಯ ಪ್ರತಿ ಹಂತದಲ್ಲಿ ಪಡೆಯಬಹುದು. ಆದರೆ ಇದನ್ನು ಮಾಡುವುದಕ್ಕೆ ಮುಂಚೆ ಒಬ್ಬ ಶಿಕ್ಷಕರು ಒಂದು ವಾರದ ತರಬೇತಿಯನ್ನು ಪಡೆಯುವಾಗ ಇನ್ನೊಬ್ಬ ಶಿಕ್ಷಕರು ಶಾಲೆಯನ್ನು ನಡೆಸಿಕೊಂಡು ಹೋಗುವಂತೆ ಅನುವು ಮಾಡಲು ಪ್ರತಿಯೊಂದು ಏಕಶಿಕ್ಷಕ ಶಾಲೆಗಳಲ್ಲಿ ಇನ್ನೊಬ್ಬ ಶಿಕ್ಷಕರನ್ನು ನೇಮಿಸಬೇಕು.

'ನಿಷ್ಠಾ' ತರಬೇತಿಯು ಶಿಕ್ಷಕರನ್ನು ತರಗತಿಗಳಿಗೆ ಪ್ರಯೋಜನ ತಲುಪುವುದನ್ನು ಖಾತ್ರಿಪಡಿಸುವುದು ಚಿಂತನಶೀಲ ಅಭ್ಯಾಸಿಗರನ್ನಾಗಿ ರೂಪಿಸುವ ಗುರಿಯನ್ನು ಹೊಂದಿದೆ. ಆದ್ದರಿಂದ ಮಾಡ್ಯೂಲಿನ ಎಲ್ಲ ವಿಷಯಗಳ ಬಗ್ಗೆ ತರಬೇತುದಾರರು ಚೆನ್ನಾಗಿ ಸುಸಜ್ಜಿತರಾಗುವುದು ಅತ್ಯಗತ್ಯ. ತುಂಬಾ ಕಡಿಮೆ ಅಥವಾ ಯಾವುದೇ ಬೋಧನಾ ಅನುಭವವನ್ನು ಹೊಂದಿರದ ಅನೇಕ ಶಿಕ್ಷಕರಿಗೆ ಈ ಮಾಡ್ಯೂಲುಗಳನ್ನು ಕಡಿಮೆ ಬೋಧನಾನುಭವ ಹೊಂದಿರುವ ಅಥವಾ ಅನನುಭವಿಗಳಿಗೆ ಗ್ರಹಿಸುವುದು ಬಹಳ ಸುಲಭವಲ್ಲ. ಉದಾಹರಣೆಗೆ, ಇಲ್ಲಿ ಪರಿಸರವಿಜ್ಞಾನದ ಒಂದು ಮಾಡ್ಯೂಲಿನ (Environmental Science Module) ಒಂದು ಚಿಂತನಶೀಲ ಪ್ರಶ್ನೆಯಿದೆ: 'ಎನ್‌ಸಿಇಆರ್‌ಟಿ, ಇವಿಎಸ್ (ಪರಿಸರ ವಿಜ್ಞಾನ) ಪಠ್ಯಪುಸ್ತಕಗಳಲ್ಲಿನ ಕೆಲವು ಅಭ್ಯಾಸಗಳನ್ನು ಗುರುತಿಸಿ ಪರಿಸರ ವಿಜ್ಞಾನ ವಿಷಯದ ಬಗ್ಗೆ ತಿಳುವಳಿಕೆ ಹಾಗೂ ಕಾಳಜಿ ಉಂಟುಮಾಡಲು ಕೆಲವು ನಿರ್ಣಾಯಕ ವಿಮರ್ಶಾತ್ಮಕ ವಿಷಯಗಳ ಬಗ್ಗೆ ಮಕ್ಕಳೊಂದಿಗೆ ಚರ್ಚೆ ಮಾಡಿ' ಎಂದು. ಈ ನಿರೀಕ್ಷೆಯಂತೆ ತಮ್ಮ ತರಗತಿಯಲ್ಲಿ ಚರ್ಚೆ ನಡೆಸಲು ಒಬ್ಬ ಶಿಕ್ಷಕರು ಗಹನವಾದ ಅಧ್ಯಯನ ನಡೆಸಬೇಕಾಗುತ್ತದೆ. ಇಲ್ಲಿ ಶಿಕ್ಷಕರ ವರ್ಚಸ್ಸು ಪ್ರಮುಖವಾಗುತ್ತದೆ. ಶಿಕ್ಷಕರು ಮಾಡ್ಯೂಲ್‌ಗಳನ್ನು ಬಳಸಿಕೊಳ್ಳಲು ನಿಯಮಿತವಾಗಿ ಸ್ವಯಂ ಕಲಿಕೆಯ ಅಭ್ಯಾಸವನ್ನು ಮಾಡಬೇಕಾಗುತ್ತದೆ. ಆಗ ಮಾತ್ರ ಅವರು ಮಕ್ಕಳನ್ನು ತಲುಪಲು ಸಾಧ್ಯ. ಶಿವ್ ಬ್ಲಾಕ್‌ನಂತಹ ಪ್ರದೇಶಗಳಲ್ಲಿ ಕೆಲಸ ಮಾಡುವ ನಿಯಮಿತವಾಗಿ ಬೋಧಿಸುವುದನ್ನು ಹೊರತುಪಡಿಸಿ ಅನೇಕ ಕೆಲಸಗಳೊಂದಿಗೆ ಸೆಣಸಾಡುವ ಶಿಕ್ಷಕರು ತಮ್ಮ ಶಾಲೆಗಳಲ್ಲಿ ಇದನ್ನು ಮಾಡಲು ಸಾಧ್ಯವೇ?

**ಆದ್ಯತೀಕರಣಕ್ಕೆ ಸಲಹೆಗಳು**

ಮಾನವ ಅಭಿವೃದ್ಧಿ ಮಾನದಂಡಗಳನ್ನು (Human development parameters) ಒಂದು ದೇಶದ ಅಭಿವೃದ್ಧಿಗೆ ಪ್ರಮುಖವೆಂದು ಪರಿಗಣಿಸುವುದಾದರೆ, ನಿರ್ದಿಷ್ಟ ಸನ್ನಿವೇಶದ ಅವಶ್ಯಕತೆಗಳಿಗೆ ಸಂಬಂಧಿಸಿ ಗೋಚರಿಸುವಂತೆ ಹಿಂದೆ ಉಳಿದಿರುವ ಬಾಡ್‌ಮೇರ್ ಮತ್ತು ಶಿವ್‌ನಂತಹ ಬ್ಲಾಕುಗಳಿಗೆ ವಿಶೇಷ ಆದ್ಯತೆ ಸಿಗಬೇಕು. ದುರದೃಷ್ಟವಶಾತ್, ದಶಕಗಳಿಂದ ಈ ರೀತಿಯ ಆದ್ಯತೆಯು ಕನಸಾಗಿಯೇ ಉಳಿದಿದೆ. ಇಂತಹ ಸಂದರ್ಭದಲ್ಲಿ, ಉಂಟು–ಮಾಡಬೇಕಾದ ಅವಕಾಶದಲ್ಲಿ ತೀವ್ರ ಕೊರತೆಯಿರುವುದರಿಂದ ಕಲಿಕೆಯ ಅಗತ್ಯ ಮತ್ತು ಕಲಿಯುವ ಬಯಕೆ ಇವೆರಡನ್ನೂ ಹೊಂದಿದ್ದರೂ ಈ ಮಕ್ಕಳು ಕಲಿಕೆಯಿಂದ ವಂಚಿತರಾಗಿದ್ದಾರೆ. ತಮ್ಮ ದೈನಂದಿನ ಬದುಕಿನಲ್ಲಿ ಅಡೆತಡೆಗಳನ್ನು ಎದುರಿಸುವ ಈ ಪ್ರದೇಶದ ವಿದ್ಯಾರ್ಥಿಗಳಲ್ಲಿ ಭಾರೀ ಸಾಧನಾ ಶಕ್ತಿಯಿದೆ. ಇಷ್ಟೆಲ್ಲಾ ಅಡೆತಡೆಗಳನ್ನು ಹೊಂದಿದ್ದರೂ ಕೆಲವು ಶಾಲೆಗಳಲ್ಲಿ ಬಹಳ ಬದ್ಧತೆಯುಳ್ಳ ಶಿಕ್ಷಕರೂ ಇದ್ದಾರೆ ಮತ್ತು ಅವರು ತಮ್ಮ ಸೀಮಿತ ಸಂಪನ್ಮೂಲಗಳೊಂದಿಗೆ ಎಲ್ಲ ಅಡೆತಡೆಗಳನ್ನೂ ದಾಟಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲು ಸಿದ್ಧರಾಗಿದ್ದಾರೆ. ಇದು ಬಹಳ ಸಂತೋಷದ ಸಂಗತಿ. ಶಿಕ್ಷಕರ ಪೈಕಿ ಇಂತಹ 'ಕಿಡಿಗಳನ್ನು' ಗುರುತಿಸುವುದು ಮುಖ್ಯ ಮತ್ತು ಅವರ ನಾಯಕತ್ವವನ್ನು ವಿವಿಧ ಸ್ವರೂಪಗಳಲ್ಲಿ ಸೂಕ್ತ ಕಾರ್ಯಕಾರಿ ನಾಯಕತ್ವ ಗುಣವನ್ನಾಗಿ ಬೆಳೆಸಿ ಬಳಸುವ ಅಗತ್ಯವಿದೆ. ಇದು ಖಂಡಿತವಾಗಿಯೂ ಶಿಕ್ಷಣದ ಗುಣಮಟ್ಟಕ್ಕೆ ಹೆಚ್ಚಿನ ಮೌಲ್ಯವನ್ನು ಸೇರಿಸುತ್ತದೆ. ನಮ್ಮ ದೇಶವೇ ಹೆಮ್ಮೆಪಡುವಂತೆ ಈ ಶಾಲೆಗಳಲ್ಲಿ ಕೆಲವು ಅತ್ಯುತ್ತಮ ಕ್ರೀಡಾಪಟುಗಳು ಎಂಜಿನಿಯರ್‌ಗಳು, ಸಮಾಜವಿಜ್ಞಾನಿಗಳು, ಗೀತರಚನೆಕಾರರು, ವೈದ್ಯರು ಮತ್ತು ಎಲ್ಲಾ ರೀತಿಯ ವೃತ್ತಿಪರರು ಹೊರಬರುವಂತೆ ತಯಾರುಮಾಡಬಹುದು. ಇದನ್ನು ಸಾಧಿಸಲು ಸರ್ಕಾರವು ಪರಿಗಣಿಸಬೇಕಾದ ಕೆಲವು ಕಾರ್ಯನಿಬಂಧನೆಗಳ ಸಂಕ್ಷಿಪ್ತ ಪರಿಶೀಲನಾಪಟ್ಟಿ ಇಲ್ಲಿದೆ:

- ಈ ಶಾಲೆಗಳಿಗೆ ಬೆಂಬಲ ಸಿಬ್ಬಂದಿಗಳನ್ನು ನೇಮಿಸಬೇಕು.
- ಪ್ರತಿಯೊಂದು ಶಾಲೆಗೂ ತರಗತಿಗಳ (ಶ್ರೇಣಿಗಳ) ಅಗತ್ಯಕ್ಕೆ ತಕ್ಕಂತೆ ಶಿಕ್ಷಕರನ್ನು ನೇಮಿಸಬೇಕು ಮತ್ತು ವಿದ್ಯಾರ್ಥಿ–ಶಿಕ್ಷಕರ ಅನುಪಾತದ ಪ್ರಕಾರವಲ್ಲ.
- ದೂರ ಪ್ರದೇಶಗಳಿಂದ ಪ್ರಯಾಣ ಮಾಡಿ ಶಾಲೆಗಳಿಗೆ ಬರಲು ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಸಾರಿಗೆ ಸೌಲಭ್ಯಗಳನ್ನು ಒದಗಿಸಬೇಕು.
- ಶಿಕ್ಷಕರಲ್ಲಿ ನಾಯಕತ್ವ ಗುಣ ಬೆಳೆಸಿ ಪ್ರೋತ್ಸಾಹಿಸಲು ಶಿಕ್ಷಕ ತರಬೇತುದಾರರ ನಿಯಮಿತ ಭೇಟಿ ಮತ್ತು ಆಯಾ ಶಾಲೆಗಳಲ್ಲಿಯೇ ಪ್ರಾತ್ಯಕ್ಷಿಕೆ ತರಗತಿಗಳು ನಡೆಯಬೇಕು (ಶಾಲಾ ಮಕ್ಕಳು ತಮ್ಮ ನಿಯಮಿತ ತರಗತಿಗಳಿಂದ ವಂಚಿತರಾಗುವಂತೆ ಸಂಪರ್ಕವಿಲ್ಲದ ಪ್ರದೇಶಗಳಲ್ಲಿ ಸ್ಥಳ ಮತ್ತು ಊಟದ ವ್ಯವಸ್ಥೆಗಾಗಿ ಅನಗತ್ಯವಾಗಿ ಖರ್ಚು ಮಾಡುವುದರ ಬದಲಿಗೆ).

ಬಾಡ್‌ಮೇರ್‌ನ ಶಿವ್ ಮತ್ತು ಅಂತಹ ಇನ್ನೂ ಅನೇಕ ಕುಗ್ರಾಮದ ಶಾಲೆಗಳಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿ ಕಿಡಿಗಳು ಭರವಸೆಯ ಆಶಾಕಿರಣಗಳಾಗಿ ಜ್ಞಾನದೀಪವನ್ನು ಹೊತ್ತಿಸಲಿ.

**ಉಲ್ಲೇಖಗಳು**


Singh, Padam and Satyendra Keshari (2016). Development of Human Development Index at District Level for EAG States. *Statistics and Applications*, Volume 14, Nos. 1 & 2, 2016 (New Series) pp. 43-61.

*www.censusindia.gov.in/2011census/C-series/C08.html*

*www.india.gov.in*

*udise.in*





**ಡಾ. ಶಾಶ್ವತಿ ಪೈಕ್** ಅವರು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿದ್ದಾರೆ. ಅವರು ಭೂಗೋಳಶಾಸ್ತ್ರದಲ್ಲಿ ಪದವಿ ಪಡೆದಿದ್ದಾರೆ ಮತ್ತು ನವದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಿಂದ ಎಂಫಿಲ್ ಮತ್ತು ಪಿಎಚ್‌ಡಿ ಮುಗಿಸಿದ್ದಾರೆ. ಅವರ ಆಸಕ್ತಿಯ ಎರಡು ಸಂಶೋಧನಾ ಕ್ಷೇತ್ರಗಳು: (1) ವಯಸ್ಕರ ಶಿಕ್ಷಣ ಮತ್ತು ಅದರ ಪ್ರಸ್ತುತತೆ (2) ದುರ್ಗಮ ಪ್ರದೇಶಗಳಲ್ಲಿನ ಶಾಲೆಗಳ ವಾಸ್ತವತೆಯನ್ನು ಅನ್ವೇಷಿಸುವುದು, ಅದರಲ್ಲೂ ವಿಶೇಷವಾಗಿ ನೈಸರ್ಗಿಕ ಅಪಾಯಗಳಿಗೆ ತುತ್ತಾಗುವ ಮತ್ತು ಅಂತಹ ಕ್ಷೇತ್ರಗಳಲ್ಲಿ ಪ್ರಸ್ತುತ ಶಿಕ್ಷಣ ನೀತಿಗಳು ಮತ್ತು ಆಚರಣೆಗಳ ಪ್ರಸ್ತುತತೆಯನ್ನು ಅರಿಯುವುದು. ತಮ್ಮ ಸಂಶೋಧನೆಯನ್ನಾಧರಿಸಿ ಅನೇಕ ಪುಸ್ತಕಗಳು ಮತ್ತು ಲೇಖನಗಳನ್ನು ಪ್ರಕಟಿಸಿದ್ದಾರೆ. ಅವರನ್ನು saswati@azimpremjifoundaton.orgನಲ್ಲಿ ಸಂಪರ್ಕಿಸಬಹುದು.



ಅನುವಾದ: **ಹೇಮಾದೇವಿ ಬಿ ಎನ್** । ಪರಿಶೀಲನೆ: **ನಾಗಮಣಿ ಎಸ್ ಎನ್**